ಪ್ರಜಾವಾಣಿ

**Online Newspaper Clipping Service**

**Dtd- Tuesday, 24th June 2025** **Page No. 02**

# ಮೆಡಿಕಲ್ ಕಾಲೇಜಿನಲ್ಲಿ ಯೋಗ ದಿನಾಚರಣೆ

ಕೋಲಾರ: ನಗರದ ಶ್ರೀ ದೇವರಾಜ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನೆ ಸಂಸ್ಥೆಯಲ್ಲಿ ರಾಷ್ಟ್ರೀಯ ಯೋಗ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು. ಸಂಸ್ಥೆ ಆವರಣದಲ್ಲಿ ಎಲ್ಲರೂ ಸಂಘಟಿತರಾಗಿ ಯೋಗ ದಿನಾಚರಣೆಯನ್ನು ಅದ್ದೂರಿಯಿಂದ ಆಚರಿಸಿದರು. 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ 10 ಕ್ಕೂ ಹೆಚ್ಚು ಮಂದಿ ಅಧಿಕಾರಿಗಳು ಪಾಲ್ಗೊಂಡು ಯೋಗ ಪ್ರದರ್ಶನ ನೀಡಿದರು, ಯೋಗಸಂಗಮದ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ.ಬಿ.ವೆಂಗಮ್ಮ, ರಿಜಿಸ್ಟ್ರರ್ ಮುನಿನಾರಾಯಣ. ಕಾಲೇಜಿನ ಡೀನ್ ಡಾ. ಅರವಿಂದ, ನಟರಾಜನ್, ಪ್ರಾಂಶುಪಾಲರಾದ ವಿಜಯಲಕ್ಷ್ಮೀ, ಡಾ.ಶಶಿಧರ್, ಹೆಚ್.ಓ.ಸಿ. ,ಅಶ್ವಿನಿ ಬೀಳಗಿ ಸೇರಿದಂತೆ ಅನೇಕರು ಭಾಗವಹಿಸಿ ಯೋಗದ ಮಹತ್ವವನ್ನು ತಿಳಿಸಿ ಕೊಟ್ಟರು, ಮೆಡಿಸನ್ ವಿಭಾಗ, ನರ್ಸಿಂಗ್ ವಿಭಾಗ, ಆರ್.ಎಲ್.ಜಾಲಪ್ಪ ಆಸ್ಪತ್ರೆಯ ವಿಭಾಗದ ಫಾರ್ಮಸಿ ವಿಭಾಗದವರು ವಿದ್ಯಾರ್ಥಿಗಳು ಯೋಗ ಪ್ರದರ್ಶನ ನೀಡಿದರು.

# ಅರಸು ವೈದ್ಯಕೀಯ ಕಾಲೇಜಲ್ಲಿ 'ಯೋಗಸಂಗಮ'





ಕೋಲಾರ ಜೂ ೨೩

ನಗರದ ಹೊರವಲಯದ ಟಮಕದ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯಲ್ಲಿ ವಿಶ್ವ ಯೋಗ ದಿನದಂದು ಯೋಗ ಸಂಗಮ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದಿತು.

ಸಂಸ್ಥೆಯ ಬೋಧಕ ವರ್ಗ, ಅಧಿಕಾರಿಗಳು ಮತ್ತು ಇನ್ನೂರಕ್ಕೂ ಅಧಿಕ ವಿದ್ಯಾರ್ಥಿಗಳು ಬಯಲು ರಂಗಮಂದಿರದಲ್ಲಿ ನಡೆದ ಯೋಗಾಭ್ಯಾಸ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಸಂಸ್ಥೆಯ ರಾಷ್ಟ್ರೀಯ ಸೇವಾ ಯೋಜನೆ ಘಟಕ ಮತ್ತು ಸಮುಗ್ರ ಔಷಧಿ ವಿಭಾಗದವರು ದೇವರಾಜ ಅರಸು ನರ್ಸಿಂಗ್ ಕಾಲೇಜ್ ಮತ್ತು ಆರ್.ಎಲ್. ಜಾಲಪ್ಪ ಫಾರ್ಮಸಿ ಕಾಲೇಜ್ ಸಹಯೋಗದಲ್ಲಿ ಕಾರ್ಯಕ್ರಮವನ್ನು ಆಯೋಜಿಸಿದ್ದು ಉಪ ಕುಲಪತಿ ಡಾ॥ ಬಿ. ವೆಂಗಮ್ಮ, ರಿಜಿಸ್ಟ್ರಾರ್ ಡಾ॥ ಮುನಿನಾರಾಯಣ, ಡೀನ್ ಡಾ॥ ಅರವಿಂದ್ ನಟರಾಜನ್, ಪ್ರಾಚಾರ್ಯ ಡಾ॥ ವಿಜಯಲಕ್ಷ್ಮಿ, ಡಾ॥ ಶಶಿಧರ್, ಡಾ॥ ಅಶ್ವಿನ್ ಬೀಳಗಿ ಇದ್ದರು.